# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅರಕೆರೆ ಉಪ ವಿಭಾಗದ ವಾರ್ಡ್ ಸಂಖ್ಯೆ-187 ಪುಟ್ಟೇನಹಳ್ಳಿ ಕಛೇರಿಯಲ್ಲಿ ದಿನಾಂಕ:05-12-2020ರಂದು ನಡೆದ ಸಭೆಯ ನಡವಳಿಗಳು

### ಸಭೆ ಪಾಲ್ಗೊಂಡಿದ್ದವರ ವಿವರಗಳು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ರಾಜು ಎನ್. ಉಪ ಆಯುಕ್ತರು ಪೂರ್ವ ವಲಯ(ನೋಡಲ್ ಅಧಿಕಾರಿ) | 9448246726 |
| 2 | ಝಾನ್ಸಿ ಆರ್.ಕೆ. ಸಹಾಯಕ ಅಭಿಯಂತರರು(ಸದಸ್ಯ ಕಾರ್ಯದರ್ಶಿ | 7829139972 |
| 3 | ವಿನಯ್, ಎಇ ಬಿ.ಡಬ್ಲೂಎಸ್ಎಸ್‌ಬಿ | 9449801799 |
| 4 | ಆರ್ ಹೆಚ್ ದಾಸರ್ ಬೆಸ್ಕಾಂ ಜೆ.ಇ. | 9449840427 |
| 5 | ಮಂಜುನಾಥ್ ವರ್ಕ್ ಇನ್ಸ್‌ಪೆಕ್ಟರ್ | 9449441165 |
| 6 | ದಿಲೀಪ್, ಕಿರಿಯ ಆರೋಗ್ಯ ಪರಿವೀಕ್ಷಕರು | 9611864215 |
| 7 | ರಾಜು ಘನತ್ಯಾಜ್ಯ ಮೇಲ್ವಿಚಾರಕರು | 9880967643 |
| 8 | ಸೂರ್ಯ ಪ್ರಕಾಶ್ | |
| 9 | ಅರುಣ್ ಆರ್.ಡಬ್ಲ್ಯೂ.ಎ | |
| 10 | ಡಿ.ಎಂ ಇಂದಿರಾ | 9945468045 |
| 11 | ಮಹೇಶ್ , ಅರಣ್ಯ ವೀಕ್ಷಕರು | |
| 12 | ಸಿದ್ದಗಂಗಪ್ಪ, ಹಿ.ಆ.ಪ | |

*****************

ದಿನಾಂಕ: 05/12/2020ರಂದು ಬೆಳಿಗ್ಗೆ 10.30 ಗಂಟೆಗೆ ನೆಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಅಯೋಜಿಸಲಾಗಿ ಮೊದಲಿಗೆ ಹಾಜರಿದ್ದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳಿಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದು ಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

**01. ಸಂಚಾರ ಇಲಾಖೆ**

ಪುಟ್ಟೇನಹಳ್ಳಿ 187 ವಾರ್ಡಿಗೆ ಸಂಬಂಧಿಸಿದಂತೆ ಸಂಚಾರ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿಲ್ಲದ ಕಾರಣ , ದೀರ್ಘಕಾಲದವರೆಗೂ ರಸ್ತೆ ಬದಿಗಳಲ್ಲಿ ನಿಲ್ಲಿಸಲಾಗಿರುವ ಎಲ್ಲಾ ವಾಹನಗಳನ್ನು ತೆರವುಗೊಳಿಸಲು ಸೂಚಿಸಲು ತಿಳಿಸಲಾಯಿತು.

**02.ಕೋವಿಡ್‌ನ ಬಗ್ಗೆ.**

ಪುಟ್ಟೇನಹಳ್ಳಿ 187 ವಾರ್ಡಿಗೆ ಸಂಬಂಧಿಸಿದಂತೆ ಕೋವಿಡ್-19ರ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ

ಒಟ್ಟು ಪ್ರಕರಣಗಳು: 589

ಸಕ್ರಿಯ ಪ್ರಕರಣಗಳು: 72

ಮರಣ: 08

ಬಿಡುಗಡೆಯಾದ ಪ್ರಕರಣಗಳು: 509

ಹೋಮ್ ಐಸೋಲೇಷನ್: 72

ಆಸ್ಪತ್ರೆ: 0

ಆರೋಗ್ಯ ಕೇಂದ್ರ: ಕೋಣನಕುಂಟೆ

ಪರೀಕ್ಷಾ ಕೇಂದ್ರ: ಕಿದ್ವಾಯಿ ಆಸ್ಪತ್ರೆ

ಕೋವಿಡ್ ಪರೀಕ್ಷಾ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕೆಂದು ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ. ಪರೀಕ್ಷಾ ಕೇಂದ್ರವನ್ನು ಆದಷ್ಟು ಕೋಳಗೇರಿ ಪ್ರದೇಶಗಳಲ್ಲಿ ಹಾಗೂ ಕಾರ್ಮಿಕ ಪ್ರದೇಶದಲ್ಲಿ ನಡೆಸಬೇಕು. ನಡೆಸುವ ಒಂದು ದಿನ ಮುಂಚಿತವಾಗಿ ಕೋವಿಡ್ ಪರೀಕ್ಷೆಯ ಬಗ್ಗೆ ಅರಿವು ಕಾರ್ಯಕ್ರಮವನ್ನು ಮಾಡಿ ನಂತರ ಪರೀಕ್ಷಾ ಕೇಂದ್ರವನ್ನು ನಡೆಸಬೇಕು. ಕೋವಿಡ್ ಪರೀಕ್ಷೆಯನ್ನು ಸಾಧ್ಯವಾದಷ್ಟು ಬೇಗ ಅಂದರೆ ಬೆಳಿಗ್ಗೆ 7 ಗಂಟೆಗೆ ಪ್ರಾರಂಭಿಸಿ ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ನೆಡೆಸಬೇಕೆಂದು ತಿಳಿಸಿರುತ್ತಾರೆ. ಅಗತ್ಯವಿದ್ದಲ್ಲಿ ಪೋಲೀಸರ ಸಹಾಯದೊಂದಿಗೆ ಕೋವಿಡ್ ಪರಿಕ್ಷೆಯನ್ನು ನೆಡಸಬಹುದು.

**03.ರಸ್ತೆ ಗುಂಡಿಗಳ ಬಗ್ಗೆ/ ಕಟ್ಟಡ ಮತ್ತು ರಸ್ತೆ ತ್ಯಾಜ್ಯಗಳ ಬಗ್ಗೆ**

ರಸ್ತೆ ಗುಂಡಿಗಳ ಸಂಪೂರ್ಣ ವಿವರಗಳನ್ನು ಸಂಗ್ರಹಿಸಲು ಟ್ರಾಫಿಕ್ ಪೋಲೀಸ್ ಇಲಾಖೆ ಮತ್ತು ಘನ ತ್ಯಾಜ್ಯ ನಿರ್ವಹಣಾ ವಿಭಾಗದವರು ಮಾಹಿತಿಯನ್ನು ನೀಡಿರುತ್ತಾರೆ.

24ನೇ ಮುಖ್ಯರಸ್ತೆಯ ಡಾಂಬರೀಕರಣ ಕಾಮಗಾರಿನ್ನು ಸದ್ಯದಲ್ಲೇ ಪ್ರಾರಂಭ ಮಾಡಲಾಗುವುದು ಅದರ ಜೋತೆಯಲ್ಲೇ ರಸ್ತೆಯಲ್ಲಿರುವ ಬಿದ್ದಿರುವ ಗುಂಡಿಗಳನ್ನು ಮುಚ್ಚಲಾಗುವುದು ಎಂದು ವಾರ್ಡ್‌ನ ಅಭಿಯಂತರರಾದ ಝಾನ್ಸಿ ಆರ್ ಕೆ ರವರು ತಿಳಿಸಿರುತ್ತಾರೆ.

ಮ್ಯಾನ್ ಹೊಲ್ ಸಮಸ್ಯೆಯಿದ್ದಲ್ಲಿ ಮೊದಲೆ ಬಿಡಬ್ಲೂ ಎಸ್‌ಎಸ್‌ಬಿ ಇಲಾಖೆಯೊಂದಿಗೆ ಚರ್ಚಿಸಿ ಸರಿಪಡಿಸಿದ ನಂತರ ಕಾಮಾಗಾರಿಯನ್ನು ಪ್ರಾರಂಭಿಸ ತಕ್ಕದ್ದು ಎಂದು ಅಧ್ಯಕ್ಷರು ತಿಳಿಸಿರುತ್ತಾರೆ.

**04.ಹಸಿ ಮತ್ತು ಒಣ ಕಸವನ್ನು ವಿಂಗಡಣೆ ಮಾಡುವ ಬಗ್ಗೆ.**

ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು ಮಾತನಾಡಿ, ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಒಣ ಕಸ, ಹಸಿ ಕಸವನ್ನು ಸರಿಯಾಗಿ ವಿಭಜನೆ ಮಾಡಬೇಕು ಹಾಗೂ ಅಗತ್ಯವಿದ್ದಲ್ಲಿ ಎನ್.ಜಿ.ಓ. ಮತ್ತು ಆರ್.ಡಬ್ಲ್ಯೂ.ಎ. ಸಹಾಯದಿಂದ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮವನ್ನು ನೆಡೆಸಬೇಕು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ವಿಲೆವಾರಿ ಮಾಡುತ್ತಿರುವುದನ್ನು ತಡೆಯಲು ಸೂಚಿಸಿರುತ್ತಾರೆ. ಹಾಗೂ ಹೆಚ್ಚಿನ ಜನಸಂಖ್ಯೆವುಳ್ಳ ಅಪಾರ್ಟ್‌ಮೆಂಟಗಳಲ್ಲಿ ಸಾಧ್ಯವಾದಷ್ಟು ಹಸಿ ಕಸ ಮತ್ತು ಒಣ ಕಸವನ್ನು ಅಲ್ಲಿಯೆ ಬೇರ್ಪಡಿಸಿ ಕೊಡಬೇಕೆಂದು ತಿಳಿಸಲಾಗಿದೆ.

ಇದುವರೆಗೂ ವಾರ್ಡ್‌ನಲ್ಲಿ ಸಾರ್ವಜನಿಕರ ದೂರು ಪ್ರತಿ ನಿತ್ಯವೂ ಇರುತ್ತಿದ್ದು ನೋಡೆಲ್ ಅಧಿಕಾರಿಯವರು ಬಂದ ನಂತರ ಕಸದ ತೊಂದರೆಯನ್ನು ನಿವಾರಿಸಿದ್ದಾರೆ. ವಾರದಲ್ಲಿ 1 ಅಥವಾ 2 ದೂರುಗಳು ಮಾತ್ರ ಬರುತ್ತವೆ. ಈ ತೊಂದರೆಯನ್ನು ನಿವಾರಿಸಲು ಇನ್ನೂ ಹೆಚ್ಚಿನ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

ಘನತ್ಯಾಜ್ಯ ಸಂಗ್ರಹ ವಾಹನಗಳು ಮತ್ತು ಸಂಗ್ರಹದ ಸಮಯ ವಿವರಗಳನ್ನು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.

ಆಟೋ ಟಿಪ್ಪರ್-16, ಸಮಯ ಬೆಳಿಗ್ಗೆ 7 ಗಂಟೆಗೆ
ಕಾಂಪ್ಯಾಕ್ಟರ್-03, ಬೆಳೆಗ್ಗೆ 10 ಗಂಟೆಗೆ

**05.ಬೆಸ್ಕಾಂ**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕತ್ತರಿಸಿದ ಮರಗಳನ್ನು ಈಗಾಗಲೇ ತೆರವುಗೊಳಿಸಿರುವುದಾಗಿ ಕಿರಿಯ ಅಭಿಯಂತರರಾದ ದಾಸರ್ ರವರು ತಿಳಿಸಿರುತ್ತಾರೆ ಹಾಗೂ ಅನುಮತಿ ಇಲ್ಲದೆ ರಸ್ತೆಗಳನ್ನು ಕತ್ತರಿಸುವಂತಿಲ್ಲ ಉಲ್ಲಂಘನೆ ಮಾಡಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

**06.ಬಿ.ಡಬ್ಲ್ಯೂ.ಎಸ್.ಎಸ್.ಬಿ.**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಒಳಚರಂಡಿ ಅವಶೇಷಗಳನ್ನು ಸಾಧ್ಯವಾದಷ್ಟು ತೆರವುಗೊಳಿಸಲಾಗಿದೆ. ಹಾಗೂ ರಸ್ತೆಗಳ ಪುನಃಸ್ಥಾಪನೆ ಮಾಡಲು ಪ್ರಾರಂಭಿಸಲಾಗಿದೆಯೆಂದು ಸಹಾಯಕ ಅಭಿಯಂತರರಾದ ವಿನಯ್‌ರವರು ತಿಳಿಸಿರುತ್ತಾರೆ.

**07.ಸಮಾಜ ಕಲ್ಯಾಣ ಇಲಾಖೆ**

ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಬೀದಿ ಬದಿಯಲ್ಲಿ ವ್ಯಾಪಾರ ಮಾಡುವುವರಿಗೆ ಕಲ್ಯಾಣ ಇಲಾಖೆಯಿಂದ ಲೈಸೆನ್ಸ್ ಹಾಗೂ ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿಯಿಂದ 10,000ರೂ ಸಾಲವನ್ನು ನೀಡಲಾಗುತ್ತಿದ್ದು. ಈ ಅರ್ಜಿಗಳನ್ನು ವಾರ್ಡ್ ಕಛೇರಿಯಲ್ಲಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಹಾಕಲಾಗುತ್ತಿದ್ದು ಇದುವರೆಗೂ 136 ಅರ್ಜಿಗಳನ್ನು ಹಾಕಲಾಗಿದೆ. 10 ಅರ್ಜಿಗಳು ತಿರಸ್ಕರಿಸಲಾಗಿದೆ. ಬೀದಿ ಬದಿ ವ್ಯಾಪಾರಿಗಳ 45 ಲೈಸೆನ್ಸ್‌ನ್ನು ನೀಡಿರುತ್ತಾರೆ.

ಪೌರ ಕಾರ್ಮಿಕರ ಮಕ್ಕಳ ಕಾಲೇಜು ಮತ್ತು ಶಾಲಾ ಶುಲ್ಕಾ ಮರುಪಾವತಿಯ ಬಗ್ಗೆ ಅನುಸರಿಸಬೇಕೆಂದು ಟೈಲರಿಂಗ್ ಟೀಚರ್ ಇಂದಿರಾ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದ್ದಾರೆ. ಕಿರಿಯ ಆರೋಗ್ಯ ಪರೀವೀಕ್ಷಕರ ಜೋತೆಗೂಡಿ ಪೌರ ಕಾರ್ಮಿಕರಿಗೆ ಅರ್ಜಿಗಳನ್ನು ನೀಡಿ ಅದರ ಬಗ್ಗೆ ಅರಿವು ಮೂಡಿಸಬೇಕೆಂದು ತಿಳಿಸಿರುತ್ತಾರೆ.

**08. ಬಿ.ಬಿ.ಎಂ.ಪಿ ನಮ್ಮ ನಗರ ನಮ್ಮ ಆಯ್ಯವ್ಯಯ 2021–22**

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ನಮ್ಮ ನಗರ ನಮ್ಮ ಆಯವ್ಯಯ 2021–22ನೇ ಸಾಲಿನ ಕಾರ್ಯಕ್ರಮವನ್ನು ಜನರ ಜೊತೆಯಲ್ಲಿ ಕೂಡಿ, ಅವರ ಅನಿಸಿಕೆಗಳನ್ನು ಎಲ್ಲಾ ವಾರ್ಡ್ ವ್ಯಾಪ್ತಿಯಿಂದ ಪಡೆದು ಆಯ್ಯವ್ಯಯವನ್ನು ತಯಾರಿಸಲು ಮಾನ್ಯ ಆಯುಕ್ತರು ಸೂಚಿಸಿರುತ್ತಾರೆ.

ಈ ಮೊದಲು 12500 ಅನಿಸಿಕೆಗಳ ಮೇರೆಗೆ ರೂ 515 ಕೋಟಿಗಳ ಪ್ರಾಜೆಕ್ಟ್ ಮಾಡಿರುತ್ತದೆ.

ಈ ಸಾಲಿನ ಎರಡು ಮುಖ್ಯವಾದ ವಿಷಯಗಳನ್ನೊಳಗೊಂಡು ನಮ್ಮೆಲ್ಲರಿಗೂ ಇದು ಮುಖ್ಯವಾಗಿರುತ್ತದೆ.

ಸಾರ್ವಜನಿಕ ಸೌಚಾಲಯ ಅವಶ್ಯಕತೆ, ರಿಪೇರಿ, ಸೌಲಭ್ಯಗಳು ಮತ್ತು ಪಾದಚಾರಿಮಾರ್ಗಗಳ ನಿರ್ಮಾಣ, ರಿಪೇರಿ, ಒತ್ತುವರಿ ಇತ್ಯಾದಿಗಳ ಬಗ್ಗೆ ಸಲಹೆ, ಸೂಚನೆಗಳನ್ನು, ಸಾರ್ವಜನಿಕರ ಅನಿಸಿಕೆಗಳನ್ನು ಪಡೆದು ಮುಂಬರುವ 2021–22ನೇ ಸಾಲಿನಲ್ಲಿ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

**09. ಮುಂದಿನ ಸಭೆಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ತಿಳಿಸಿರುತ್ತಾರೆ.**

ದಿನಾಂಕ:19/12/2020 ಬೆಳಿಗ್ಗೆ 10.30 ರಂದು ನಡೆಯಲಿರುವ ಸಭೆಗೆ ಬೆಸ್ಕಾಂ, ರೆವಿನ್ಯೂ ಅಧಿಕಾರಿಗಳು, ಆರೋಗ್ಯ ಅಧಿಕಾಗಳು ಹಾಗೂ ಹಿರಿಯ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾಣಿಜ್ಯ ಸ್ಥಾಪನ ಗುತ್ತಿಗೆದಾರರುಗಳು, ಬೆಂಗಳೂರು ಜಲ ಮಂಡಳಿಯ ಅಧಿಕಾರಿಗಳು, ಅರಣ್ಯಾಧಿಕಾರಿಗಳು, ಸರ್ಕಾರೇತರ ಸಂಸ್ಥೆ(ಎನ್.ಜಿ.ಓ.)ಯವರು, ವಸತಿ ಕಲ್ಯಾಣ ಸಂಘ (ಆರ್.ಡಬ್ಲ್ಯೂ.ಎ.), ಪೋಲೀಸ್ ಇಲಾಖೆ ಎಲ್ಲಾರನ್ನೂ ಕಡ್ಡಾಯವಾಗಿ ಹಾಜರಾಗಲು ತಿಳಿಸಿರುತ್ತಾರೆ. ಗೈರು ಹಾಜರಿಯಾದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

**10. ವಾರ್ಡ್ ಅಭಿವೃದ್ಧಿಯ ಬಗ್ಗೆ**

ಸಭೆಯ ಅಧ್ಯಕ್ಷರು ಮಾತನಾಡುತ್ತಾ ಪುಟ್ಟೇನಹಳ್ಳಿ ವಾರ್ಡ್‌ನ ಸ್ವಚ್ಚತೆ, ಸುಧಾರಣೆಯ ಹಾಗೂ ಬಾಕಿ ಇರುವ ಅನುಮೋದಿತ ಕಾಮಗಾರಿಗಳನ್ನು ಹಾಗೂ ರಸ್ತೆ ಗುಂಡಿ ಮುಚ್ಚುವ ಕಾರ್ಯಕ್ರವನ್ನು ಶೀಘ್ರ ನಿರ್ವಹಿಸುವ ಬಗ್ಗೆ ಹೆಚ್ಚಿನ ಗಮನಹರಿಸಲು ತಿಳಿಸಿರುತ್ತಾರೆ.

**ನೋಡಲ್ ಅಧಿಕಾರಿ ವಾರ್ಡ್ ಸಮಿತಿ–187**
**ಹಾಗೂ ಉಪ ಆಯುಕ್ತರು(ಪೂರ್ವ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**